

ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಹೊಂದಿದೆ ಎನ್ನಬಹುದಾದ ಹಾಗೂ ಸಂಚಾರ ಸೌಕರ್ಯವನ್ನು ಹೊಂದಿರುವ ಕರ್ನಾಟಕದ ಯಾವ ಊರಿಗೆ ಹೋದರೂ ಕಾಣಬಹುದಾದ ಒಂದು ಸಾಮಾನ್ಯ ದೃಶ್ಯ – ಅಲ್ಲಿನ ಮಕ್ಕಳನ್ನು ಹತ್ತಿರದ ಕಾನ್ವೆಂಟ್‌ಗಳಿಗೆ ಕರೆದುಕೊಂಡು ಹೋಗುವ ಹಾಗೂ ಮರಳಿ ಊರುಮುಟ್ಟಿಸುವ ಶಾಲಾಬಸ್‌ಗಳು! ಹಿಂದೆಲ್ಲ ಹೈಸ್ಕೂಲಿಗೋ ಕಾಲೇಜಿಗೋ ಪಟ್ಟಣಕ್ಕೆ ಹೋಗುವುದೇ ದೊಡ್ಡ ವಿಷಯವಾಗಿತ್ತು. ಈಗ ದುನಿಯಾ ಬದಲಾಗಿದೆ. ಮೂರು ವರ್ಷ ತುಂಬಿದ ಕಂದಮ್ಮನೂ ತಿಂಡಿಯ ಡಬ್ಬಿಯೊಂದಿಗೆ ಸ್ಕೂಲ್ ವ್ಯಾನ್ ಏರುತ್ತದೆ.

ಮಕ್ಕಳ ಜಗತ್ತಷ್ಟೇ ಬದಲಾಗಿದೆಯೇನು? ಅಮ್ಮಂದಿರ ಜಗತ್ತಿನಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಮಕ್ಕಳನ್ನು ಶಾಲೆಗೆ ಅಣಿಗೊಳಿಸುವುದು, ಅವರು ಬಂದ ನಂತರ ಹೋಂ ವರ್ಕ್ ಮಾಡಿಸುವುದು, ಯೂನಿಫಾರ್ಮ್ ಶುಚಿಯಾಗಿಡುವುದು – ಮಕ್ಕಳ ಜೊತೆಗೆ ಅಮ್ಮಂದಿರೂ ಶಾಲೆಯ ಕೆಲಸಕ್ಕೆ ಒಪ್ಪಿಸಿಕೊಳ್ಳಬೇಕಾಗುತ್ತದೆ. ಇಷ್ಟು ಮಾತ್ರವಲ್ಲ, ಮಕ್ಕಳೊಂದಿಗೆ ತಾನೂ ಇಂಗ್ಲಿಷ್‌ನಲ್ಲಿ ಮಾತನಾಡಲು ಪ್ರಯತ್ನಿಸುತ್ತಾಳೆ. ನಿಧನಿಧಾನವಾಗಿ ಕಾನ್ವೆಂಟ್‌ನ ಶಿಸ್ತು ಮನೆಗಳಲ್ಲೂ ಕಾಣಿಸತೊಡಗುತ್ತದೆ.

ಶಯನಾ ಎನ್ನುವ ಈ ಹುಡುಗಿಯ ಕಥೆ ನೋಡಿ. ಸಿಬಿಎಸ್‌ಇ ಶಾಲೆಯಲ್ಲಿ ಇವಳ ಕಲಿಕೆ. ಶಾಲೆಯಿಂದ ಓಡಿ ಮನೆಗೆ ಬಂದವಳೇ ಅಜ್ಜಿಯ ಬಳಿ ಹೋಗಿ ಮಾತು ಶುರು ಮಾಡುತ್ತಾಳೆ. ಅಜ್ಜಿಗೆ ಗೊತ್ತಿರುವುದು ತುಳು ಭಾಷೆ ಮಾತ್ರ. ಅಜ್ಜಿಯೊಡನೆ ಮಾತು ಮುಗಿಸಿ ತಿಂಡಿ ತಿನ್ನುತ್ತಾ ಇರಬೇಕಾದರೆ ಅಮ್ಮನ ಗದರಿಕೆ: 'ಯೂ ಜಸ್ಟ್ ಸ್ಟಿಕ್ ಟು ಇಂಗ್ಲಿಷ್. ಡೋಂಟ್ ವೇಸ್ಟ್ ಯುವರ್ ಟೈಮ್'.

ಅಮ್ಮ ಅವಳದೇ ಶಾಲೆಯಲ್ಲಿ ಶಿಕ್ಷಕಿ. ಮನೆಯಲ್ಲಿ ತುಳುವಾಗಲೀ ಕನ್ನಡವಾಗಲೀ ಮಾತನಾಡಬಾರದು ಎಂದು ಮಗಳಿಗೆ ಕಟ್ಟಪ್ಪಣೆ ಮಾಡಿದ್ದಾರೆ. ಇಂಗ್ಲಿಷ್‌ಗೆ ಅಂಟಿಕೊಂಡಿದ್ದರೆ ಹತ್ತಾರು ಪ್ರಯೋಜನಗಳಿವೆ ಎನ್ನುವುದು ಅವರ ಲೆಕ್ಕಾಚಾರ. ಇಂಗ್ಲಿಷ್ನಲ್ಲಿ ವ್ಯವಹರಿಸುವುದು ಸುಲಲಿತವಾಗಬೇಕಾದರೆ ದೈನಂದಿನ ಜೀವನದಲ್ಲಿಯೂ ಇಂಗ್ಲಿಷ್ನಲ್ಲಿಯೇ ಮಾತನಾಡುವುದು ಉತ್ತಮ ಎನ್ನುವ ಅನಿಸಿಕೆ ಅವರದು.